# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಸಿಬ್ಬಂದಿ ತರಬೇತಿ ಮತ್ತು ಸಂಶೋಧನಾ ಕೇಂದ್ರ-ಮಳವಳ್ಳಿ ಇಲ್ಲಿ ನೀಡಲಾಗುತ್ತಿರುವ ತರಬೇತಿ ಕಾರ್ಯಕ್ರಮಗಳಿಗೆ ತರಬೇತಿ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:** 1)ಸರ್ಕಾರಿ ಆದೇಶ ಸಂಖ್ಯೆ: ಕಾಇ 105 ಇಟಿಫ 2006 ದಿನಾಂಕ:27/12/2006.
2)ಪತ್ರ ಸಂ. ಉತನಿ/ತರಬೇತಿ/ಯೋ-01/ವಿವ-79/2006-07 ದಿನಾಂಕ: 26/10/2007ಕ್ಕೆ ಅಂತ್ಯಗೊಂಡ ಪತ್ರ ವ್ಯವಹಾರ.

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖಿತ (1)ರ ಸರ್ಕಾರಿ ಆದೇಶದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ತರಬೇತಿ ವಿಭಾಗದಡಿ ರಾಜ್ಯದ ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತಿದಾರರಿಗೆ ತರಬೇತಿಯನ್ನು ನೀಡಲು ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ರಾಜ್ಯ ತರಬೇತಿ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ.

ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರು ಮೇಲೆ ಓದಲಾದ ಉಲ್ಲೇಖಿತ(2)ರ ಪತ್ರದಲ್ಲಿ ಮಳವಳ್ಳಿಯ ರಾಜ್ಯ ತರಬೇತಿ ಮತ್ತು ಸಂಶೋಧನಾ ಕೇಂದ್ರದಲ್ಲಿ ನೀಡಲಾಗುತ್ತಿರುವ ವಿವಿಧ ತರಬೇತಿಗಳಿಗಾಗಿ ತಗಲುವ ವೆಚ್ಚದ ಬಗ್ಗೆ ಸೂಕ್ತ ಶುಲ್ಕವನ್ನು ಸ್ಥಳೀಯ ಸಲಹಾ ಸಮಿತಿಯ ಸದಸ್ಯರುಗಳಿಂದ ಸಮಾಲೋಚಿಸಿ ನಿರ್ಧರಿಸಿದ ನಂತರ ಸದರಿ ಶುಲ್ಕವನ್ನು ಈ ಕೆಳಗಿನಂತೆ ನಿಗದಿಪಡಿಸಲು ಅನುವಾಗಲು ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿದ್ದಾರೆ.

| ಕ್ರಮ ಸಂಖ್ಯೆ | ತರಬೇತಿ ವಿವರ | ನಿಗದಿ ಪಡಿಸಲಾದ ತರಬೇತಿ ಶುಲ್ಕ |
|---|---|---|
| 1. | ಪ್ರಿನ್ಸಿಪಲ್ ಆಫ್ ಟೀಚಿಂಗ್ (P.O.T.)<br>(ತರಬೇತಿ ಅವಧಿ 3 ತಿಂಗಳಿಗೆ) | ರೂ.3000-00 |
| 2. | ಅಲ್ಪಾವಧಿ ತರಬೇತಿ | |
| | ಅ) ಒಂದು ವಾರದ ತರಬೇತಿ | ರೂ.800-00 |
| | ಆ) ಎರಡು ವಾರದ ತರಬೇತಿ | ರೂ.1000-00 |
| | ಇ) ಮೂರು ವಾರದ ತರಬೇತಿ | ರೂ.1500-00 |
| | ಈ) ನಾಲ್ಕು ವಾರದ ತರಬೇತಿ | ರೂ.2000-00 |

ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಕಾಇ 307 ಇಟಿಐ 2007 ಬೆಂಗಳೂರು, ದಿನಾಂಕ 25/01/2008**

ಮಳವಳ್ಳಿಯ ರಾಜ್ಯ ತರಬೇತಿ ಮತ್ತು ಸಂಶೋಧನಾ ಕೇಂದ್ರದಲ್ಲಿ ನೀಡಲಾಗುತ್ತಿರುವ ವಿವಿಧ ತರಬೇತಿಗಳಿಗೆ ತಗಲುವ ವೆಚ್ಚದ ಬಗ್ಗೆ ಸೂಕ್ತ ಶುಲ್ಕವನ್ನು ಈ ಕೆಳಕಂಡಂತೆ ನಿಗದಿಪಡಿಸಲು ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ತರಬೇತಿ ವಿವರ | ನಿಗದಿ ಪಡಿಸಲಾದ ತರಬೇತಿ ಶುಲ್ಕ |
|---|---|---|
| 1. | ಪ್ರಿನ್ಸಿಪಲ್ ಆಫ್ ಟೀಚಿಂಗ್ (P.O.T.) (ತರಬೇತಿ ಅವಧಿ 3 ತಿಂಗಳಿಗೆ) | ರೂ.3000-00 (ಮೂರು ಸಾವಿರ ರೂಪಾಯಿಗಳು ಮಾತ್ರ) |
| 2. | ಅಲ್ಪಾವಧಿ ತರಬೇತಿ | |
| | ಅ) ಒಂದು ವಾರದ ತರಬೇತಿ | ರೂ.800-00 (ಎಂಟು ನೂರು ರೂಪಾಯಿಗಳು ಮಾತ್ರ) |
| | ಆ) ಎರಡು ವಾರದ ತರಬೇತಿ | ರೂ.1000-00 (ಒಂದು ಸಾವಿರ ರೂಪಾಯಿಗಳು ಮಾತ್ರ) |
| | ಇ) ಮೂರು ವಾರದ ತರಬೇತಿ | ರೂ.1500-00 (ಒಂದು ಸಾವಿರದ ಐನೂರು ರೂಪಾಯಿಗಳು ಮಾತ್ರ) |
| | ಈ) ನಾಲ್ಕು ವಾರದ ತರಬೇತಿ | ರೂ.2000-00 (ಎರಡು ಸಾವಿರ ರೂಪಾಯಿಗಳು ಮಾತ್ರ) |

ಈ ತರಬೇತಿ ಕಾರ್ಯಕ್ರಮದ ಸಂಬಂಧ ವಸೂಲಿ ಮಾಡಲಾಗುವ ತರಬೇತಿ ಶುಲ್ಕವನ್ನು ರೆವಿನ್ಯೂ ಲೆಕ್ಕಶೀರ್ಷಿಕೆ "0230-00-800-4-00 ಇತರೆ ರಸೀದಿಗಳ ಸ್ವೀಕೃತಿ ಕೈಗಾರಿಕಾ ತರಬೇತಿ ಸಂಸ್ಥೆಗಳು" ರಡಿ ಜಮಾ ಮಾಡುವಂತೆ ಸೂಚಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಂಖ್ಯೆ: ಎಫ್‌ಡಿ 792 ವೆಚ್ಚ-9/07 ದಿನಾಂಕ: 09/01/2008ರ ಟಿಪ್ಪಣಿಯಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಭಾರತ ರಾಷ್ಟ್ರಪತಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/1/08
(ಅಬ್ದುಲ್ ರೆಹಮಾನ್)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಉದ್ಯೋಗ ಮತ್ತು ತರಬೇತಿ)

ಗೆ:

ಸಂಕಲನಕಾರರು, ಸರ್ಕಾರಿ ಹೊರವಲಯ ಮುದ್ರಣಾಲಯ, ಕೆಂಗೇರಿ, ಮೈಸೂರು ರಸ್ತೆ, ಬೆಂಗಳೂರು-59 ಇವರ ಮಾಹಿತಿಗೆ ಹಾಗೂ ಈ ಆದೇಶವನ್ನು ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಸದರಿ ಪ್ರಕಟಣೆಯ 50 ಪ್ರತಿಗಳನ್ನು ಪೀಠಾಧಿಕಾರಿ-4, ಕಾರ್ಮಿಕ ಇಲಾಖೆ, ಕೊಠಡಿ ಸಂಖ್ಯೆ-411, ನಾಲ್ಕನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

ಪ್ರತಿ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು.
3) ಆರ್ಥಿಕ ಇಲಾಖೆ, ವೆಚ್ಚ-9, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6) ಸರ್ಕಾರದ ಉಪಕಾರ್ಯದರ್ಶಿಯವರು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
7) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.